<u>ಸಾಕ್ಷಿಯನ್ನು ದಿನಾಂಕ **10-11-2025** ರಂದು ಸತ್ಯಪ್ರಮಾಣ ಭೋಧಿಸಲಾಯಿತು.</u>

**<u>ಪಾಟಿ ಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ ಎನ್ ಎಲ್ ಪಿ ವಕೀಲರಿಂದಃ</u>**

ಈ ದಾವೆ ಬರೆಯಲು ಮಾಹಿತಿಯನ್ನು ನಾನೇ ಕೊಟ್ಟಿದ್ದೇನೆ. ಆ ದಾವೆಯನ್ನು ತಯಾರಿಸಿದ ನಂತರ ಅದರಲ್ಲಿರುವ ವಿಷಯಗಳನ್ನೆಲ್ಲಾ ನಮ್ಮ ವಕೀಲರು ನಮಗೆ ತಿಳಿಸಿದ್ದಾರೆ. ಆ ದಾವೆಯನ್ನು ಓದಿ ಹೇಳಿದ ನಂತರ ಆ ದಾವಾದ ವಾದ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ. ನಾನು ತೆಲುಗಿನಲ್ಲಿ ವಾದ ಪತ್ರಕ್ಕೆ ಸಹಿ ಮಾಡಿದ್ದೇನೆ. ಪ್ರತಿವಾದಿ ನಂಃ-1 ಮತ್ತು 2 ರವರು ಈ ಹಿಂದೆ ಗಂಗಾವತಿಯ ಪುರಸಭೆಯಲ್ಲಿ ಕೆಲಸ ಮಾಡಿದ್ದಾರೆ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಅಣ್ಣ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಯಜಮಾನರು ಎಂದರೆ ಸರಿ. 1 ನೇ ಪ್ರತಿವಾದಿ ನನಗೆ ಭಾವನಾಗಬೇಕು ಎಂದರೆ ಸರಿ. ದಾವಾ ಆಸ್ತಿಯು ಪ್ಲಾಟ್ ನಂಃ 38 ಎಂದರೆ ಸರಿ. ಅದರಂತೆ ಪ್ಲಾಟ್ ನಂಃ- 37 1 ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ ಎಂದರೆ ಸರಿ. ಪ್ಲಾಟ್ ನಂಃ- 38 ನನಗೆ ಮತ್ತು ಪ್ಲಾಟ್ ನಂಃ- 37 ನನ್ನ ಭಾವ 1 ನೇ ಪ್ರತಿವಾದಿಗೆ ನಗರಸಭೆಯವರು ಕೊಟ್ಟಿದ್ದಾರೆ ಎಂದರೆ ಸರಿ. ಈ ಎರಡೂ ಪ್ಲಾಟುಗಳು ಪರಸ್ಪರ ಹೊಂದಿಕೊಂಡು ಇರುತ್ತವೆ ಎಂದರೆ ಸರಿ. ಪ್ಲಾಟು ನಂಃ- 37 ನನ್ನ 1 ನೇ ಪ್ರತಿವಾದಿಯ ಸ್ವಾಧೀನದಲ್ಲಿದೆ, ಪ್ಲಾಟ್ ನಂಃ- 38 ನನ್ನ ಸ್ವಾಧೀನದಲ್ಲಿದೆ ಎಂದರೆ ಸರಿ. ಪುರಸಭೆಯವರು ರೂ. 125/- ಪಡೆದುಕೊಂಡು ಖರೀದಿ ಪತ್ರದ ಮೂಲಕ ನಮಗೆ ಈ ಪ್ಲಾಟುಗಳನ್ನು ಕೊಟ್ಟಿದ್ದಾರೆ ಎಂದರೆ ಸರಿ. ಈ ಪ್ಲಾಟಿನ ಮೂಲ ಖರೀದಿ ಪತ್ರ 1 ನೇ ಪ್ರತಿವಾದಿಯ ಬಳಿ ಇರುತ್ತದೆ. ಆಗ ನಾವು ಮತ್ತು 1 ಮತ್ತು 2 ನೇ ಪ್ರತಿವಾದಿ ಕೂಡಿ ಇದ್ದಿದ್ದರಿಂದ ಮೂಲ ಖರೀದಿ ಪತ್ರ 1 ನೇ ಪ್ರತಿವಾದಿಯ ಹತ್ತಿರ ಇರುತ್ತದೆ. ಮೂಲ ಖರೀದಿ ಪತ್ರ 1 ನೇ ಪ್ರತಿವಾದಿಯ ಹತ್ತಿರ ಇರುವುದಿಲ್ಲ, ಅದು ನಮ್ಮ ಹತ್ತಿರವೇ ಇರುತ್ತದೆ, ಬೇಕಂತಲೇ ಈ ದಾವೆಯಲ್ಲಿ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮೂಲ ಖರೀದಿ ಪತ್ರ 1 ನೇ ಪ್ರತಿವಾದಿಯ ಬಳಿ ಇರುತ್ತದೆ ಎಂದು ವಾದ ಪತ್ರದಲ್ಲಿ ಹೇಳಿ ಬರೆಸಿಲ್ಲ. ಖರೀದಿ ಪತ್ರ ಕೊಡುವ ಸಮಯದಲ್ಲಿ ನಾನು, 1 ಮತ್ತು 2 ನೇ ಪ್ರತಿವಾದಿ ಮತ್ತು 1 ನೇ ಪ್ರತಿವಾದಿಯ ಹೆಂಡತಿ ಎಲ್ಲರೂ

ಕೂಡಿಯೇ ಇದ್ದೆವು ಎಂದರೆ ಸರಿ. ನಾವು ಕೂಡಿ ಇದ್ದಾಗ ದಾವಾ ಪ್ಲಾಟು ನಂಃ 38 ಅಲ್ಲದೇ ಬೇರೆ ಪ್ಲಾಟುಗಳನ್ನು ಗಂಗಾವತಿಯಲ್ಲಿ ನನ್ನ ಗಂಡ ಮತ್ತು 1 ನೇ ಪ್ರತಿವಾದಿ ಖರೀದಿ ಮಾಡಿದ್ದಾರೆ ಎನ್ನುವುದು ಗೊತ್ತಿಲ್ಲ. ಕೊಪ್ಪಳ ರಸ್ತೆಯಲ್ಲಿ ಗಿಣಿಗೇರಾ-ಗಂಗಾವತಿ ರಸ್ತೆಯಲ್ಲಿರುವ ಪ್ಲಾಟ್ ನಂಃ 309 ಅನ್ನು 15X25 ಅಡಿ ವಿಸ್ತೀರ್ಣ ಉಳ್ಳ ನಿವೇಶನವನ್ನು ನಾವು ಕೂಡಿ ಇದ್ದಾಗ ನನ್ನ ಗಂಡನ ಹೆಸರಿಗೆ ಖರೀದಿಸಿದ್ದಾರೆ ಎನ್ನುವುದನ್ನು ನಾನು ನೋಡಿಲ್ಲ, ಆದರೆ ಆ ರೀತಿ ಹೇಳುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯು ಹೇಳಿದ್ದನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೆ. ಕೇ. ಸರಿ ಇದೆ, ಎಂದು ಒಪ್ಪಿರುತ್ತಾರೆ.

(ಜಿ. ಬಿ. ಹಳ್ಳಾಕಾಯಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಗಂಗಾವತಿ.